ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾ ಯಿಕ
ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

<u>ಸಿ.ಸಿ. ಸಂಖ್ಯೆಃ **832/2020**</u>

ಫಿರ್ಯಾದಿದಾರರುಃ ಸರ್ಕಾರದ ಪರ ಬಿಳಿಕೆರೆ ಪೊಲೀಸ್ ಠಾಣೆ
ಹುಣಸೂರು ವೃತ್ತ, ಹುಣಸೂರು.

ವಿರುದ್ಧ,

ಆರೋಪಿ/ಗಳು : ಎ **1.** ಹರೀಶ
ತಂದೆ - ಹೆಟ್ಟೆಗೌಡ
ಸುಮಾರು **28** ವರ್ಷ ವಯಸ್ಸು,

ಎ **2.** ಗಿರೀಶ, ತಂದೆ - ಹೆಟ್ಟೆಗೌಡ
ಸುಮಾರು **26** ವರ್ಷ ವಯಸ್ಸು,
ಇಬ್ಬರ ವಾಸಃ ಸಿಂಗರಮಾರನಹಳ್ಳಿ ಗ್ರಾಮ
ಹುಣಸೂರು ತಾಲ್ಲೂಕು
ಮೈಸೂರು ಜಿಲ್ಲೆ.

## <u>**ದೋಷಾರೋಪಣೆ**</u>

ಶ್ರೀಮತಿ ಪೂಜಾ ಬೆಳಕೇರಿ, ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

1. ದಿನಾಂಕ 25.03.2020 ರಂದು ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ಹುಣಸೂರು ತಾಲ್ಲೂಕು ಬಿಳಿಕೆರೆ ಪೊಲೀಸ್ ಠಾಣಾ ಸರಹದ್ದು ಸಿಂಗರಮಾರನಹಳ್ಳಿ ಗ್ರಾಮದ ಸಾಕ್ಷಿ 1 ಅವರು ಸಾಕ್ಷಿ 2 ಅವರ ವಾಸದ ಮನೆಯಲ್ಲಿದ್ದಾಗ 1ನೇ ಆರೋಪಿಯಾದ ನೀವು ಏಕಾಏಕಿ ಸಾಕ್ಷಿ 2 ಅವರ ಮನೆಗೆ ಅತಿಕ್ರಮ ಪ್ರವೇಶ

ಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 448 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

2. ಎರಡನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ಮತ್ತು 2 ನೇ ಆರೋಪಿಗಳಾದ ನೀವುಗಳು ಅಪರಾಧ ಎಸಗುವ ಸಮಾನ ಉದ್ದೇಶದಿಂದ, 1 ನೇ ಆರೋಪಿಯಾದ ನೀವು ಸಾಕ್ಷಿ 2 ಅವರ ಮನೆಯ ಒಳಗೆ ಅತಿಕ್ರಮ ಪ್ರವೇಶ ಮಾಡಿದಾಗ ಸಾಕ್ಷಿ 2 ಅವರು ಕಿರುಚಿಕೊಂಡಾಗ 1 ನೇ ಆರೋಪಿಯಾದ ನೀವು ಮನೆಯಿಂದ ಓಡಿ ಹೋಗಿದ್ದು ನಂತರ ಸಾಕ್ಷಿ 2 ಅವರು 1 ನೇ ಆರೋಪಿಯನ್ನು ಕೇಳಲು ಹೋಗುತ್ತಿದ್ದಾಗ ಅಲ್ಲೇ ಮನೆ ಸಮೀಪ ನಿಂತಿದ್ದ 1 ನೇ ಆರೋಪಿಯಾದ ನಿಮಗೆ ಕೇಳಿದ್ದಕ್ಕೆ ಮಾತಿಗೆ ಮಾತು ಬೆಳೆದು 1 ನೇ ಆರೋಪಿಯಾದ ನೀವು ಸಾಕ್ಷಿ 2 ಅವರನ್ನು ಅಡ್ಡಗಟ್ಟಿ ಅವರಿಗೆ ಅಕ್ರಮ ತಡೆಯನ್ನುಂಟುಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

3. ಮೂರನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ಮತ್ತು 2 ನೇ ಆರೋಪಿಗಳಾದ ನೀವುಗಳು ಅಪರಾಧ ಎಸಗುವ ಸಮಾನ ಉದ್ದೇಶದಿಂದ, 1 ನೇ ಆರೋಪಿಯಾದ ನೀವು ಸಾಕ್ಷಿ 2 ಅವರಿಗೆ ಕೈಯಿಂದ ಮೈಗೆ ಹೊಡೆದು ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ನೋವನ್ನುಂಟುಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ

323 ಸಹವಾಚಕ ಕಲಂ 34ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

4. ಕೊನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ಮತ್ತು 2ನೇ ಆರೋಪಿಗಳಾದ ನೀವುಗಳು ಅಪರಾಧ ಎಸಗುವ ಸಮಾನ ಉದ್ದೇಶದಿಂದ, 2ನೇ ಆರೋಪಿಯಾದ ನೀವು ಸಾಕ್ಷಿ 2 ಅವರಿಗೆ ಮಾರಕಾಸ್ತ್ರವಾದ ದೊಣ್ಣೆಯಿಂದ ಸಾಕ್ಷಿ 2 ಅವರ ಬೆನ್ನಿಗೆ , ಎದೆಗೆ ಹೊಡೆದು ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ನೋವನ್ನುಂಟುಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

(ಮೇಲ್ಕಂಡ ಆಪಾದನೆಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆಪಾದನೆಗಳಿಗೆ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

**(ಪೂಜಾ ಬೆಳಕೇರಿ)**

ದಿನಾಂಕಃ **13.03.2024**

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾ ಯಿಕ
ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

**ಸಿ.ಸಿ. ಸಂಖ್ಯೆ: 832/2020**

ಫಿರ್ಯಾದಿದಾರರು: ಸರ್ಕಾರದ ಪರ ಬಿಳಿಕೆರೆ ಪೊಲೀಸ್ ಠಾಣೆ
ಹುಣಸೂರು ವೃತ್ತ, ಹುಣಸೂರು.

ವಿರುದ್ಧ,

ಆರೋಪಿ/ಗಳು : ಎ 2. ಗಿರೀಶ, ತಂದೆ - ಹೆಟ್ಟೆಗೌಡ

ಭಾರತೀಯ ದಂಡ ಸಂಹಿತೆ ಕಲಂ **240(2)** ರ ಅಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆ: ನಿಮಗೆ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ**?**

ಉತ್ತರ:

ಪ್ರಶ್ನೆ: ತಪ್ಪೊಪ್ಪಿಕೊಳ್ಳುವಿರೋ**,** ವಿಚಾರಣೆಯಾಗಬೇಕೆನ್ನುವಿರೋ**?**

ಉತ್ತರ:

ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿಯು ನೀಡಿದ ಉತ್ತರವನ್ನು ಹಾಗೆಯೇ ದಾಖಲಿಸಿಕೊಂಡಿದೆಯೆಂದು ಈ ಮೂಲಕ ದೃಢೀಕರಿಸುತ್ತೇನೆ.

(ಪೂಜಾ ಬೆಳಕೇರಿ)
ದಿನಾಂಕ: **13.03.2024** ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.